# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1115 |
| ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು | : | ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 28/12/2022 |
| ಉತ್ತರಿಸುವ ಸಚಿವರು | : | ಮಾನ್ಯ ಸಚಿವರು, ಲೋಕೋಪಯೋಗಿ ಇಲಾಖೆ. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಡಿಕೇರಿ ಜಿಲ್ಲಾಧಿಕಾರಿಗಳ ಕಛೇರಿ ಆವರಣದಲ್ಲಿನ ತಡೆಗೋಡೆ ಕುಸಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ತೆಗೆದುಕೊಂಡ ಕ್ರಮಗಳೇನು; | ಹೌದು.<br>ತಡೆಗೋಡೆ ನಿರ್ಮಾಣ ಕಾಮಗಾರಿಯು ಇನ್ನೂ ಪ್ರಗತಿ ಹಂತದಲ್ಲಿದ್ದು, ತಡೆಗೋಡೆ ಕಾಮಗಾರಿಯಲ್ಲಿ ಉಂಟಾಗಿರುವ ಲೋಪದೋಷಗಳನ್ನು ಸರಿಪಡಿಸುವ ಕುರಿತು ತಜ್ಞರೊಂದಿಗೆ ಸಮಾಲೋಚನೆ ನಡೆಸಲಾಗಿದ್ದು, ಸದರಿಯವರ ಅಭಿಪ್ರಾಯದಂತೆ ನ್ಯೂನ್ಯತೆಯನ್ನು ಸರಿಪಡಿಸುವ ಕುರಿತಂತೆ, ಗುತ್ತಿಗೆದಾರರಿಂದ ಕಾರ್ಯವಿಧಾನವನ್ನು ಪಡೆಯಲಾಗಿರುತ್ತದೆ. ಈ ಕಾರ್ಯವಿಧಾನವನ್ನು ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಮತ್ತು ಅಂದಾಜು ಪಟ್ಟಿ ಪರಿಶೀಲನಾ ಸಮಿತಿ ಸಭೆಯ ಅನುಮೋದನೆ ಪಡೆದು ಅದರಂತೆ ಪರಿಶೀಲಿಸಿ ಕ್ರಮವಹಿಸಲಾಗುವುದು. |
| ಆ) | ಈ ತಡೆಗೋಡೆಯನ್ನು ನಿರ್ಮಾಣ ಮಾಡಲು ಎಷ್ಟು ಮೊತ್ತದ ಅನುದಾನವನ್ನು ಮಂಜೂರು ಮಾಡಲಾಗಿದೆ; ಎಷ್ಟು ಅನುದಾನವನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ ತಡೆಗೋಡೆ ಕಾಮಗಾರಿಯು ಯಾವಾಗ ಪ್ರಾರಂಭಗೊಂಡು ಯಾವಾಗ ಮುಕ್ತಾಯವಾಗಿದೆ; (ಸಂಪೂರ್ಣ ವಿವರಣೆ ನೀಡುವುದು) | ಸದರಿ ಕಾಮಗಾರಿಯನ್ನು ಕೈಗೊಳ್ಳಲು ರೂ.700.00 ಲಕ್ಷಗಳ ಅನುದಾನ ಒದಗಿಸಲಾಗಿದ್ದು, ಇದುವರೆಗೆ ರೂ.625.00 ಲಕ್ಷಗಳು ವೆಚ್ಚವಾಗಿರುತ್ತದೆ.<br>ಗುತ್ತಿಗೆ ಕರಾರಿನಂತೆ ಕಾಮಗಾರಿಯನ್ನು ದಿನಾಂಕ:17.11.2020 ರಂದು ಪ್ರಾರಂಭಿಸಲಾಗಿದ್ದು, ಪ್ರಸ್ತುತ ಕಾಮಗಾರಿಯು ಇನ್ನೂ ಪ್ರಗತಿಯಲ್ಲಿರುತ್ತದೆ. |
| ಇ) | ಈ ಕಾಮಗಾರಿಯನ್ನು ಕೈಗೊಳ್ಳಲು ಯಾವಾಗ ಟೆಂಡರ್ ಕರೆಯಲಾಗಿತ್ತು. ಈ ಟೆಂಡರ್ ಗೆ ಎಷ್ಟು ಅರ್ಜಿಗಳು ಸಲ್ಲಿಕೆಯಾಗಿದ್ದವು ಯಾವ ಗುತ್ತಿಗೆದಾರರಿಗೆ ಟೆಂಡರ್ ಅನುಮತಿ ನೀಡಲಾಗಿದೆ; | ಈ ಕಾಮಗಾರಿಯನ್ನು ಕೈಗೊಳ್ಳಲು ಟೆಂಡರ್ ಪ್ರಕಟಣೆ ಸಂಖ್ಯೆ: 38/2019-20 ದಿನಾಂಕ: 23.12.2019 ರಲ್ಲಿ ಟೆಂಡರ್ ಕರೆಯಲಾಗಿತ್ತು. ಸದರಿ ಟೆಂಡರ್‌ನಲ್ಲಿ ಇಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು, ಎಲ್-1 ಗುತ್ತಿಗೆದಾರರಾದ ಶ್ರೀ.ಯು.ಐ.ರಾಮಾಂಜನೇಯಲು (ಶ್ರೀ ಅಯ್ಯಪ್ಪ ಕನ್ ಸ್ಟ್ರಕ್ಷನ್ಸ್) ಗುತ್ತಿಗೆ ಕಾರ್ಯಾದೇಶ ನೀಡಲಾಗಿದೆ. |

| | | |
|---|---|---|
| ಈ) | ಈ ಕಾಮಗಾರಿಯನ್ನು ಪೂರ್ಣಗೊಳಿಸಲು ಕಾಲಮಿತಿಯನ್ನು ವಿಧಿಸಲಾಗಿತ್ತೇ; ಈ ಕಾಮಗಾರಿಯಲ್ಲಿ ಆಗಿರುವ ಲೋಪದೋಷಗಳೇನು; ಗುತ್ತಿಗೆದಾರರು ತಡೆಗೋಡೆಯನ್ನು ನಿರ್ಮಿಸುವ ಸಂದರ್ಭದಲ್ಲಿ ಕೈಗೊಂಡಿರುವ ತಯಾರಿಗಳು, ಡಿಸೈನ್ ನ ಪ್ರತಿ ವೈಜ್ಞಾನಿಕ ಕ್ರಮಗಳು ಹಾಗೂ ಮಣ್ಣಿನ ಗುಣಮಟ್ಟದ ಪರೀಕ್ಷೆ ನಡೆಸಲಾಗಿತ್ತೇ ಹಾಗೂ ಕಾಮಗಾರಿಗೆ ಬಳಸಲಾದ ವಸ್ತುಗಳನ್ನು ಗುಣಮಟ್ಟವನ್ನು ಪರೀಕ್ಷಿಸಲಾಗಿತ್ತೇ; ಪರಿಕ್ಷೀಸಿದ್ದಲ್ಲಿ ಕಾಮಗಾರಿಯು ಅತ್ಯಂತ ಕಳಪೆ ಮಟ್ಟದಿಂದ ಕೂಡಿರಲು ಕಾರಣವೇನು; | ಗುತ್ತಿಗೆ ಕರಾರಿನಂತೆ ಕಾಮಗಾರಿಯನ್ನು ದಿನಾಂಕ:27.11.2020 ರಂದು ಪ್ರಾರಂಭಿಸಿ ದಿನಾಂಕ:26.10.2021 ರಂದು ಪೂರ್ಣಗೊಳಿಸಬೇಕಾಗಿದ್ದು, 11 ತಿಂಗಳ ಕಾಲಮಿತಿಯನ್ನು ವಿಧಿಸಲಾಗಿದೆ. ಆದಾಗ್ಯೂ ಕಾರಣಾಂತರಗಳಿಂದ ಕಾಮಗಾರಿಯ ವಿಳಂಭವಾಗಿದ್ದು, ಇನ್ನೂ ಪ್ರಗತಿಯಲ್ಲಿರುತ್ತದೆ.<br><br>ಸದರಿ ಕಾಮಗಾರಿ ಸ್ಥಳವನ್ನು ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರಿನ ನಿವೃತ್ತ ಪ್ರಾಧ್ಯಾಪಕರಾದ ಶ್ರೀ ಬಿ.ಆರ್. ಶ್ರೀನಿವಾಸ್‌ಮೂರ್ತಿ ರವರನ್ನೊಳಗೊಂಡ ತಜ್ಞರೊಂದಿಗೆ ಸ್ಥಳ ಪರಿವೀಕ್ಷಣೆ ನಡೆಸಿ, ಮಾನ್ಯ ಪ್ರಾಧ್ಯಾಪಕರ ಸಲಹೆಯಂತೆ ಆರ್.ಇ. ವಾಲ್ ತಂತ್ರಜ್ಞಾನದಂತೆ ಸದರಿ ಸ್ಥಳದ ಮಣ್ಣಿನ ಪರೀಕ್ಷಾ ವರದಿಗೆ ಅನುಗುಣವಾಗಿ ಹಾಗೂ ಆರ್.ಇ.ವಾಲ್ ನಿರ್ಮಾಣದ ಬಗ್ಗೆ ನುರಿತ ತಂತ್ರಜ್ಞರಾದ Reinforcement Earth india, New Delhi ರೊಡನೆ ಚರ್ಚಿಸಿ ಸ್ಥಳದ ಅಗತ್ಯತೆಗೆ ಅನುಸಾರ ಯೋಜನಾ ವರದಿಯನ್ನು ತಯಾರಿಸಲಾಗಿರುತ್ತದೆ.<br><br>ಸದರಿ ಯೋಜನಾ ವರದಿಗೆ ತಾಂತ್ರಿಕ ಅನುಮೋದನೆ ಪಡೆಯುವ ಸಲುವಾಗಿ ದಿನಾಂಕ:17.06.2019 ರಂದು ಜರುಗಿದ ರಾಜ್ಯಮಟ್ಟದ ತಾಂತ್ರಿಕ ಸಲಹಾ ಮತ್ತು ಅಂದಾಜುಪಟ್ಟಿ ಪರಿಶೀಲನಾ ಸಮಿತಿಯ 87ನೇ ಸಭೆಯಲ್ಲಿ ಕಾಮಗಾರಿಗೆ ಅಳವಡಿಸಲಾದ ವಿಧಾನ ಮತ್ತು ವಿನ್ಯಾಸಗಳೊಂದಿಗೆ ಮಂಡಿಸಿ ತೀರುವಳಿ ಪಡೆಯಲಾಗಿರುತ್ತದೆ.<br><br>ಆರ್.ಇ.ವಾಲ್ ಬಗ್ಗೆ ನುರಿತ ತಂತ್ರಜ್ಞರಾದ Reinforcement Earth india, New Delhi ರವರೊಂದಿಗೆ ಸಮಾಲೋಚಿಸಿ, ತಯಾರಿಸಿರುವ ವಿನ್ಯಾಸ ಮತ್ತು ನಕ್ಷೆಗಳಿಗೆ ಮುಖ್ಯ ಇಂಜಿನಿಯರ್‌ರವರ ಕಛೇರಿಯಿಂದ ಅನುಮೋದನೆ ನೀಡಲಾಗಿರುತ್ತದೆ.<br>ಕಾಮಗಾರಿಯಲ್ಲಿ ಎಂಬ್ಯಾಕ್‌ಮೆಂಟ್ ನಿರ್ಮಾಣಕ್ಕೆ ಬಳಸಿರುವ ಮಣ್ಣಿನ ಪರೀಕ್ಷೆಯನ್ನು ಗುಣಭರವಸೆ ಉಪ-ವಿಭಾಗ, ಕುಶಾಲನಗರ ರವರಿಂದ ವರದಿಯನ್ನು ಪಡೆದುಕೊಂಡು ಕಾಮಗಾರಿಯನ್ನು ನಿರ್ವಹಿಸಲಾಗಿರುತ್ತದೆ.<br><br>2022-23ನೇ ಸಾಲಿನ ಮುಂಗಾರು ಅವಧಿಯ ಜೂನ್ ಮತ್ತು ಜುಲೈ ಮಾಹೆಯ ಮೊದಲನೇ ವಾರದಲ್ಲಿ ಬಿದ್ದ ಭಾರಿ ಮಳೆಯಿಂದಾಗಿ ತಡೆಗೋಡೆಯ ಒಂದು ಭಾಗದಲ್ಲಿ ಹಲವು ಕಾಂಕ್ರೀಟ್ ಪ್ಯಾನಲ್‌ಗಳು ಉಬ್ಬಿ ಹೊರಚಾಚಿಕೊಂಡಿರುವುದರಿಂದ, ಕಾಮಗಾರಿಯಲ್ಲಿ ನ್ಯೂನತೆಯಾಗಿರುತ್ತದೆ. |

| | | |
|---|---|---|
| ಉ) | ಈ ಕುರಿತು ಯಾವುದಾದರೂ ತನಿಖೆಯನ್ನು ಕೈಗೊಳ್ಳಲಾಗಿದೆಯೇ; ತನಿಖೆ ಯಾವ ಹಂತದಲ್ಲಿ ಯಾರ ಯಾರ ಮೇಲೆ ತನಿಖೆ ನಡೆಸಲಾಗುತ್ತದೆ; ಸಂಪೂರ್ಣ ಮಾಹಿತಿ ನೀಡುವುದು; ತನಿಖೆ ಕೈಗೊಳ್ಳದೇ ಇದ್ದಲ್ಲಿ, ತನಿಖೆಯನ್ನು ನಡೆಸಲಾಗುವುದೇ; (ವಿವರಿಸುವುದು) | ಸದರಿ ಕಾಮಗಾರಿಯು ಇನ್ನೂ ಪೂರ್ಣಗೊಳ್ಳದೇ ಇರುವುದರಿಂದ ಅತಿಯಾದ ಮಳೆಯಿಂದಾಗಿ ತಡೆಗೋಡೆಯಲ್ಲಿ ಉಂಟಾಗಿರುವ ನ್ಯೂನ್ಯತೆಗಳನ್ನು ಗುತ್ತಿಗೆದಾರರೇ ಸರಿಪಡಿಸಬೇಕಾಗಿದ್ದು, ಅದರಂತೆ ಕ್ರಮ ವಹಿಸಲು ನಿರ್ದೇಶನ ನೀಡಲಾಗುವುದು. |

**(ಸಂ: ಲೋಇ 50 ಬಿಎಲ್ ಕ್ಯೂ 2022)**

**(ಸಿ.ಸಿ.ಪಾಟೀಲ)**
ಲೋಕೋಪಯೋಗಿ ಸಚಿವರು.